ಕೊಟ್ಟಿತು. ಆದರೆ ಮತ್ತೆ ಪ್ರಜ್ಞಾಪೂರ್ವಕವಾಗಿ ಮಾತೃಭಾಷೆಗೆ ಮರಳಿ ದೀರ್ಘ ಕವನಗಳನ್ನು ಬರೆದೆ. ಮರಾಠಿಯಲ್ಲಿ ಬರೆಯುವಾಗ ನನ್ನನ್ನು ಹೆಚ್ಚು ಸ್ಪಷ್ಟವಾಗಿ ಅಭಿವ್ಯಕ್ತಿಗೊಳಿಸಬಲ್ಲೆ.

5 ಸಾಹಿತ್ಯವು ಸಮಾಜದ ಮೇಲೆ ಪ್ರಭಾವ ಬೀರುತ್ತದೆ ನಿಜ. ಅನುಭವಿ ಬರಹಗಾರರಿಂದ ಬಂದ ಬರಹವು ಸಮಾಜದ ಮೇಲೆ ಹೆಚ್ಚು ಛಾಪು ಮೂಡಿಸಬಲ್ಲುದು. ಬರೆಯುವ ಎಲ್ಲರೂ ಇತರರನ್ನು ಪ್ರಭಾವಿಸಲಾರರು. ಪ್ರಭಾವ ಬೀರುವ ಗುಣಮಟ್ಟದ ಸಾಹಿತ್ಯ ಸೃಷ್ಟಿಯಾಗಬೇಕು. ಬಾಣಭಟ್ಟ ಅಂದು ಬರೆದ 'ಕಾದಂಬರಿ'ಯನ್ನು ಇಂದಿಗೂ ಸಹೃದಯರು ಹುಡುಕಿ ಓದುತ್ತಿದ್ದಾರೆ. ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ನಾನು ಶಂಕರಾಚಾರ್ಯರ ಸ್ತೋತ್ರ ಸಾಹಿತ್ಯವನ್ನು ಗಮನಿಸಿದ್ದೇನೆ. ಸಮಾಜ ಸುಧಾರಕ ಸಂತರು ಕವಿಗಳಾಗಿ ಜನರನ್ನು ಪ್ರಭಾವಿಸಿರುವುದನ್ನೂ ಗಮನಿಸಬೇಕು. ಅನ್ನಮಯ್ಯ, ವೆಂಕಟ ದೇಶಿಕಾ, ಬಸವಣ್ಣ, ಕಬೀರ, ಧ್ಯಾನೇಶ್ವರ... ಹೀಗೆ.

6 ಕನ್ನಡದ ಬಗ್ಗೆ ಹೆಚ್ಚೇನೂ ಗೊತ್ತಿಲ್ಲ. ಆದರೆ ನಾನು 'ವೇದಾಂತ'ದ ವಿದ್ಯಾರ್ಥಿನಿಯಾಗಿರುವುದರಿಂದ ಮಧ್ವಾಚಾರ್ಯರ ದ್ವೈತ ಸಿದ್ಧಾಂತವನ್ನು ಅಭ್ಯಸಿಸಿದ್ದೆ. ಅದಕ್ಕೆ ಸಂಬಂಧಿಸಿದಂತೆ, ದ್ವೈತ ಪರಿಕಲ್ಪನೆಯಿಂದ ಹೊರಹೊಮ್ಮಿದ ದಾಸ ಸಾಹಿತ್ಯ ಪರಂಪರೆಯನ್ನು ಅಧ್ಯಯನ ಮಾಡಿರುವೆ. ಪುರಂದರ ದಾಸರ ಭಜನೆಗಳೆಂದರೆ ನನಗೆ ಬಹಳ ಇಷ್ಟ. ಕನ್ನಡಿಗ ಸ್ನೇಹಿತರ ಮೂಲಕ ಅವರ ಭಜನೆಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದೇನೆ. 'ಯಾರೂ ಕೈಯ ಬಿಟ್ಟರೂ ನೀ ಕೈಯ ಬಿಡದಿರು ನಾರಾಯಣ' ಎಂಬ ಸಾಲು ನನಗೆ ಹೆಚ್ಚು ಇಷ್ಟ. ಇದು ಭಕ್ತಿಪಂಥದ ಮೂಲಸ್ರೋತ. ಮುಂದಿನ ದಿನಗಳಲ್ಲಿ ಇನ್ನಷ್ಟು ಓದಬೇಕು.

7 ನಾನು ಬರೆದ ಸಂಸ್ಕೃತ ಕೃತಿಗೆ ಪ್ರಶಸ್ತಿ ಬಂದಿದೆ. ನನ್ನ ಭಾಷೆ ಮರಾಠಿ. ಉತ್ತರ ಮತ್ತು ದಕ್ಷಿಣ ಭಾಗವನ್ನು ಪ್ರತ್ಯೇಕಿಸುವ ಮಧ್ಯಭಾಗದಲ್ಲಿ ವಾಸಿಸುವ ಜನರ ಭಾಷೆಯಿದು. ಆದ್ದರಿಂದ ಕನ್ನಡ–ಮರಾಠಿ ಭಾಷೆಯಲ್ಲಿ ಹಾಗೂ ಗುಜರಾತಿ ಮತ್ತು ಮರಾಠಿ ಭಾಷೆಯಲ್ಲಿ ಸಾಮ್ಯತೆ ಇದೆ ಎಂದು ನನಗೆ ಅನಿಸುತ್ತದೆ. ಮರಾಠಿಯಲ್ಲಿ ಶೇ. 90ರಷ್ಟು ಪದಗಳು ಸಂಸ್ಕೃತ ಮೂಲದವು. ಭಾರತೀಯ ಭಾಷೆಗಳ ಸಾಹಿತ್ಯದ ಮೇಲೆ ಸಂಸ್ಕೃತದ ಪ್ರಭಾವ ಇದೆಯೆನಿಸುತ್ತದೆ. ನನ್ನದೇ ಭಾಷೆ ಮರಾಠಿಯ ಕುರಿತು ಆಳವಾದ ಒಳನೋಟಗಳನ್ನು ಪಡೆಯಲು ಸಂಸ್ಕೃತ ಕಲಿಕೆ ನನಗೆ ಸಹಾಯ ಮಾಡಿದೆ.

8 ನೇರವಾಗಿ ಹೇಳುತ್ತೇನೆ, ಮರಾಠಿಸಾಹಿತ್ಯ ಕ್ಷೇತ್ರದ ಬಗ್ಗೆ ನನಗೆ ಹೆಚ್ಚೇನೂ ಗೊತ್ತಿಲ್ಲ. ನನ್ನ ಸೀಮಿತ ಜ್ಞಾನದಲ್ಲಿ ಹೇಳುವುದಾದರೆ ದಲಿತ ಸಾಹಿತ್ಯ ಮತ್ತು ಅವರ ಹೋರಾಟದ ಧ್ವನಿಯು ಮರಾಠಿಯಲ್ಲಿ ಪ್ರಖರವಾಗಿದ್ದು ಮಹತ್ವ ಪಡೆದುಕೊಳ್ಳುತ್ತಿದೆ. ಕವನಗಳೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟವಾಗುತ್ತಿರುವುದನ್ನು ನೋಡುತ್ತಿರುವೆ. ಸಂಸ್ಕೃತದ ಬಗ್ಗೆ ಹೇಳುವುದಾದರೆ ಪುರಾಣ ವಸ್ತುಗಳು ಮತ್ತು ಸಮಕಾಲೀನ ವಿಷಯಗಳ ಬಗ್ಗೆ ಅನೇಕ ಕೃತಿಗಳು ರಚನೆಯಾಗುತ್ತಿವೆ. ಪುರಾಣದ ಪಾತ್ರಗಳನ್ನು, ಸಂದರ್ಭಗಳನ್ನು ಬರಹಗಾರರು ಆಧುನಿಕ ದೃಷ್ಟಿಕೋನದಿಂದ ನೋಡುತ್ತಿದ್ದಾರೆ. ನಳನ ಪಾತ್ರವನ್ನಿಟ್ಟುಕೊಂಡು ನಾನೊಂದು ಕವನ ಬರೆದಿದ್ದೆ. ಮೂಲಕತೆಯ ಪ್ರಕಾರ, ನಳನನ್ನು ಮದುವೆಯಾಗುವಂತೆ ಹಂಸವೊಂದು ದಮಯಂತಿಯನ್ನು ಪ್ರಲೋಭನೆಗೊಳಗಾಗಿಸುತ್ತದೆ. ಆದರೆ, ಬಹುವರ್ಷಗಳ ನಂತರ ನಳ ಮಹಾರಾಜನು ಒಂದು ಹಂಸವನ್ನು ನೋಡಿದ ಕೂಡಲೇ ಅವನಿಗೆ, ಇದು ತನ್ನ ಮಗಳು ಇಂದ್ರಸೇನೆಯನ್ನು ಮನವೊಲಿಸಲು ಬಂದಿದೆಯೇನೋ ಎಂಬ ಭಯವಾಗುತ್ತದೆ. ಆಗ ಆ ಹಂಸವನ್ನು ಅವನು ಸ್ವಾಗತಿಸುವುದಿಲ್ಲ. ಹೀಗೆ ಸನ್ನಿವೇಶಗಳನ್ನು ಆಧರಿಸಿದ ಹೊಸ ಮಾದರಿಯ ಸಾಹಿತ್ಯವು ಸಂಸ್ಕೃತದಲ್ಲಿ ಬರುತ್ತಿದೆ. ಅಷ್ಟೇ ಅಲ್ಲ, ಗಜಲ್, ಮಿನಿಕತೆ, ಮಿನಿಕವನ ಮಾದರಿಯ ಪ್ರಕಾರಗಳಲ್ಲಿ ಕೂಡ ಸಂಸ್ಕೃತ ಸಾಹಿತ್ಯ ರಚನೆಯಾಗುತ್ತಿದೆ. ವರ್ತಮಾನವನ್ನು ತಮ್ಮ ಸಂಸ್ಕೃತ ಸಾಹಿತ್ಯದಲ್ಲಿ ಸೆರೆ ಹಿಡಿಯುವ ಅನೇಕ ಪ್ರಯತ್ನಗಳನ್ನು ಬರಹಗಾರರು ಮಾಡುತ್ತಿದ್ದಾರೆ. ●